ನಿಯಮ 334ರ ಮೇರೆಗೆ

(1) ಮೈಸೂರು ನಗರದಲ್ಲಿ ಪಡಿತರ ತಾಳಿಎಣ್ಣೆ ವಿತರಿಸುವುದು.

ಶ್ರೀ ಕೆ. ಹರ್ಷಕುಮಾರೆಗೌಡ : (ಚಾಮರಾಜ) : ಮಾನ್ಯ ಅಧ್ಯಕ್ಷಣೆಯವರೇ, ಮೈಸೂರು ನಗರದ ಪಡಿತರದಾರರಿಗೆ ಪ್ರಸಕ್ತ ಕಾರ್ಡ್ ಒಂದಕ್ಕೆ ಕೇವಲ ಅರ್ಧ ಕೆ.ಜಿ.ತಾಳೆ ಎಣ್ಣೆ ವಿತರಿಸಲಾಗುತ್ತಿದ್ದು, ಬಳಕೆದಾರರು ಅನಿವಾರ್ಯವಾಗಿ ಕಾಳಸಂತೆಯಲ್ಲಿ ಅಡಿಗೆ ಎಣ್ಣೆ ಖರೀದಿಸುವ ಅನಿವಾರ್ಯ ಪರಿಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಆದರೆ ಬೆಂಗಳೂರಿನ ಬಳಕೆದಾರರಿಗೆ ಕಾರ್ಡ್ ಒಂದಕ್ಕೆ ಒಂದು ಕೆ.ಜಿ. ಅಡಿಗೆ ಎಣ್ಣೆ ವಿತರಣೆ ಮಾಡುವ ಮೂಲಕ ಆಹಾರ ಇಲಾಖೆಯ ತಾರತಮ್ಯ ನೀತಿಯಿಂದ ಮೈಸೂರಿಗೆ ಅರ್ಧ ಕೆ.ಜಿ.ಎಣ್ಣೆ ಬೆಂಗಳೂರಿಗೆ ಒಂದು ಕೆ.ಜಿ.ಎಣ್ಣೆ ವಿತರಣೆ ಮಾಡುವುದು ಯಾವ ನ್ಯಾಯ. ಆದ್ದರಿಂದ ಸರ್ಕಾರ ಮೊದಲು ಈ ದ್ವಿಮುಖ ನೀತಿಯನ್ನು ತಪ್ಪಿಸುವ ಮೂಲಕ ತಾಳಿ ಎಣ್ಣೆಯನ್ನು ಮೊದಲಿನಂತೆ ಮೈಸೂರಿನ ನಾಗರೀಕರಿಗೂ ದೊರಕುವಂತೆ ಮಾಡುವ ಮೂಲಕ ಕಾಳಸಂತೆಯಲ್ಲಿ ಅಡಿಗೆ ಎಣ್ಣೆಯನ್ನು ಖರೀದಿಸುವ ಮೂಲಕ ಶೋಷಣೆಗೊಳಗಾಗುವಂಥ ನಾಗರೀಕರನ್ನು ತುರ್ತಾಗಿ ತಪ್ಪಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರಾದ ಹರ್ಷಕುಮಾರ್‌ಗೌಡರು ಮೈಸೂರು ನಗರದಲ್ಲಿ ಪಡಿತರ ಕಾರ್ಡ್‌ದಾರರಿಗೆ ತಾಳಿಎಣ್ಣೆ ವಿತರಣೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸನ್ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವಂತೆ ತಿಳಿಸುತ್ತೇನೆ.

(2) ಬೆಂಗಳೂರು-ತುಮಕೂರು ರಸ್ತೆಯಲ್ಲಿರುವ ಎಂ.ಇಡಿ. ಸಂಸ್ಥೆಯನ್ನು ಬಿ.ಹೆಚ್.ಇ.ಎಲ್. ಸಂಸ್ಥೆಗೆ ವಹಿಸುವುದು

ಶ್ರೀ ಕೆ.ಲಕ್ಕಣ್ಣ : (ರಾಜಾಜಿನಗರ) : ಮಾನ್ಯ ಅಧ್ಯಕ್ಷಣೆಯವರೇ, ತುಮಕೂರು ರಸ್ತೆಯಲ್ಲಿರುವ ಮೈಸೂರು ಎಲೆಕ್ಟ್ರಕಲ್ ಇಂಡಸ್ಟ್ರೀಸ್ (ಎಂ.ಇ.ಡಿ) ಸಂಸ್ಥೆಯು ಕಳೆದ 10 ವರ್ಷಗಳಿಂದಲೂ ನಷ್ಟ ಹೊಂದುತ್ತಿರುವುದಕ್ಕೆ ಕಾರಣ ಇಲ್ಲಿ ಉತ್ಪಾದನೆ ಸರಿಯಾದ ರೀತಿಯಲ್ಲಿ ಆಗದೆ ಇರುವುದು ಮತ್ತು ಆದಂಥ ಉತ್ಪಾದನಾ ವಸ್ತುಗಳೂ ಕೂಡ ಮಾರುಕಟ್ಟೆಯಲ್ಲಿ ಮಾರಾಟವಾಗಿದಿರುವುದು. ಈ ಕಾರಣದಿಂದ ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಸರ್ಕಾರದವರು ಮಾತುಕತೆ ನಡೆಸುತ್ತಿರುವುದಾಗಿ ತಿಳಿದುಬಂದಿದ್ದು ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕವರ್ಗದವರು ತುಂಬಾ ಕಳವಳಕ್ಕೊಳಗಾಗಿದ್ದಾರೆ. ಒಂದು ವೇಳೆ ಇದನ್ನು ಮಾರಾಟ ಮಾಡುವುದು ನಿಜವೇ ಆಗಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ವಹಿಸುವುದು ಸೂಕ್ತ. ಕಾರಣ ಈ ಹಿಂದೆ ನಷ್ಟದಲ್ಲಿದ್ದ ಫೋರ್ಸಿಲಿನ್ ಫ್ಯಾಕ್ಟರಿಯನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕ ಬಿ.ಹೆಚ್.ಇ.ಎಲ್.ನವರು ತೆಗೆದುಕೊಂಡು ಈಗ ಉತ್ತಮ ಸ್ಥಿತಿಯಲ್ಲಿ ನಡೆಸುತ್ತಿದ್ದಾರೆ. ಆದ್ದರಿಂದ ಈ ಸದರಿ ಎಂ.ಇ.ಐ. ಸಂಸ್ಥೆಯನ್ನು ಬಿ.ಹೆಚ್.ಇ.ಎಲ್ ಸಂಸ್ಥೆಯವರಿಗೆ ವಹಿಸಿಕೊಟ್ಟರೆ ಕಾರ್ಖಾನೆ ಉತ್ತಮಗೊಳ್ಳುವುದರ ಜೊತೆಗೆ ಇಲ್ಲಿನ ಕಾರ್ಮಿಕ ವರ್ಗದ ಕುಟುಂಬಗಳಿಗೆ ಮುಂದೆ ಒದಗಬಹುದಾದ ತೊಂದರೆಯನ್ನು ತಪ್ಪಿಸಿದಂತಾಗುತ್ತದೆ. ಈ ಬಗ್ಗೆ ಸರ್ಕಾರದ ಖಚಿತ ಅಭಿಪ್ರಾಯ ಏನೆಂಬುದನ್ನು ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮುಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.